**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

**O.S. No. 193/2022**

| | | |
|---|---|---|
| ಸಾಕ್ಷಿದಾರರ ಹೆಸರು | : | ಶ್ರೀಜಿತ್ |
| ತಂದೆಯ ಹೆಸರು | : | ಶ್ರೀಧರ್ ಶೆಟ್ಟಿ |
| ವಯಸ್ಸು | : | 38 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಗಂಡತ್ತೂರು ಗ್ರಾಮ, ಹೆಚ್.ಡಿ. ಕೋಟೆ ತಾ. |

**ಸಾಕ್ಷಿಯನ್ನು ದಿನಾಂಕಃ 16.02.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿಗಳ ಪರ ಶ್ರೀ. ಎ.ವಿ. ವಕೀಲರಿಂದಃ**

1 ನೇ ವಾದಿ ನನ್ನ ತಾಯಿಯಾಗಿದ್ದು, 2 ರಿಂದ 5 ನೇ ವಾದಿಗಳು ನನಗೆ ಚಿಕ್ಕಮ್ಮಂದಿರಾಗಬೇಕು ಮತ್ತು 6 ನೇ ವಾದಿ ನನಗೆ ಮಾವನಾಗಬೇಕು. ಇವರೆಲ್ಲರು ನನ್ನ ಪರವಾಗಿ ಒಂದು ಸಾಮಾನ್ಯ ಮುಖ್ತ್ಯಾರ್ ನಾಮೆಯನ್ನು ಬರೆದುಕೊಟ್ಟಿರುತ್ತಾರೆ. ಆದ್ದರಿಂದ ನಾನು ಈ ಪ್ರಕರಣದಲ್ಲಿ ವಾದಿಗಳ ಮುಖ್ತ್ಯಾರ್ ನಾಮೆದಾರನಾಗಿದ್ದು, ನನ್ನ ಮುಖ್ಯ ವಿಚಾರಣೆ ಬಾಬ್ತು ನನ್ನ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿಗಳು ನನ್ನದೇ ಆಗಿರುತ್ತವೆ.

ನನ್ನ ತಾಯಿ ಈಗಾಗಲೇ ವಾಸಾ-1 ಎಂದು ವಿಚಾರೆಗೊಳಪಟ್ಟು ನಿ.ಪಿ.-1 ರಿಂದ ನಿ.ಪಿ.-3 ರಂತೆ ದಾಖಲೆಗಳನ್ನು ಗುರುತಿಸಿಕೊಂಡಿದ್ದು, ಸದರಿ ದಾಖಲೆಗಳನ್ನೇ ಅವಲಂಭಿಸಿರುತ್ತೇನೆ.

ವಾದಿಗಳು ನನ್ನ ಪರವಾಗಿ ಬರೆದುಕೊಟ್ಟಿರುವ ಸಾಮಾನ್ಯ ಮುಖ್ತ್ಯಾರ್ ನಾಮೆಯನ್ನು ಹಾಜರುಪಡಿಸಿದ್ದೇನೆ. ಅದನ್ನು ನಿ.ಪಿ.-4 ಎಂದು ಗುರುತಿಸಲಾಯಿತು.

**<u>ಪಾಟಿ ಸವಾಲು:</u> ಮಾನ್ಯ ಪ್ರತಿವಾದಿಗಳ ಪರ ವಕೀಲರು ಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು.**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**